comcomplaining against destruction of their crops in the course of work undertaken recently under the Honnemaradu Project;

(*b*) if so, the nature of action taken in that behalf?

A.—Sri H. K. VEERANNA GOWDH (Minister for Public Works).—

(*a*) Representations have been received about damage to crops.

(*b*) Action to award crop compensation in accordance with the Rules, is being taken.

ಶ್ರೀ ಡಿ. ಮೂಕಪ್ಪ.—(ಎ)ಗೆ ಉತ್ತರವಾಗಿ ಇಷ್ಟು ಮನವಿಗಳು ಬಂದಿವ ಎಂದು ಹೇಳಿಲ್ಲ. ಆದ್ದರಿಂದ ಸರ್ಕಾರದವರಿಗೆ ಈ ಸಂಬಂಧವಾಗಿ ಎಷ್ಟು ಮನವಿಗಳು ಬಂದಿವೆ?

*ಶ್ರೀ ಎಚ್. ಕೆ. ವೀರಣ್ಣಗೌಡ.—ನೋಟೀಸ್.

ಶ್ರೀ ಡಿ. ಮೂಕಪ್ಪ.—ಸರ್ಕಾರದವರು ಈ ಭೂಮಿಗಳನ್ನು ಅಕ್ವಯಂ ಮಾಡಿಕೊಳ್ಳುವಾಗ ಆ ಭೂಮಾಲೀಕರ ಅನುಮತಿಪಡೆಯಲಾಗಿತ್ತೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಸಾಮಾನ್ಯವಾಗಿ ಭೂಮಿಯನ್ನು ಸರ್ಕಾರದವರು ಸಾರ್ವಜನಿಕ ಉಪಯೋಗಕ್ಕಾಗಿ ಸ್ವಾಧೀನಪಡಿಸಿಕೊಳ್ಳುವಾಗ ಮಾಲೀಕರ ತಕರಾರುಗಳನ್ನೂ ಅಹವಾಲುಗಳನ್ನೂ ಕೇಳುತ್ತಾರೆ. ಆದರೆ ಅತಿಜರೂರಾಗಿ ಕೆಲವು ಸಂದರ್ಭಗಳಲ್ಲಿ ಅಕ್ವಿಜಿಷನ್ ಆಕ್ಟ್ ಸೆಕ್ಷನ್ 17ರ ಪ್ರಕಾರ ಅಕ್ವಯರ್ ಮಾಡಿಕೊಳ್ಳಬೇಕಾಗಿ ಬಂದಾಗ ಮೊದಲು ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡು ಅನಂತರ ಅದರ ಬಗ್ಗೆ ಕೊಡಬೇಕಾದ ಪರಿಹಾರವನ್ನು ನಿಗದಿ ಮಾಡಲಾಗುತ್ತದೆ. ಖಾಲಿ ಜಮೀನಿದ್ದರೇನು ಪರಿಹಾರ ಕೊಡಬೇಕು, ಬೆಳೆ ನಷ್ಟೇತ ಇದ್ದ ಭೂಮಿಗೇನು ಪರಿಹಾರಕೊಡಬೇಕೆಂಬುದನ್ನೆಲ್ಲಾ ಅನಂತರ ನಿರ್ಧರಿಸಲಾಗುತ್ತದೆ.

ಶ್ರೀ ಡಿ. ಮೂಕಪ್ಪ.—ಆ ಫಸಲಿದ್ದಂಥ ಜಮೀನುಗಳಿಗೆ ಪರಿಹಾರಕೊಡದಂತೆ ಸ್ವಾಧೀನಪಡಿಸಿಕೊಳ್ಳುವುದು ಕ್ರಮಬದ್ಧವೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಎಲ್ಲ ಕ್ರಮಗಳನ್ನೂ ಸಾಮಾನ್ಯವಾಗಿ ಅನುಸರಿಸಿಯೇ ಆ ಭೂಮಿಗಳನ್ನು ತೆಗೆದುಕೊಳ್ಳಲಾಗುತ್ತದೆ. ಆದರೆ ಈ ಪ್ರಕೃತ ಸಂದರ್ಭದಲ್ಲಿ ಅತಿ ಜರೂರಾಗಿ 12-13 ಎಕರೆ ಜಮೀನು ಬೇಕಾಗಿತ್ತು, ತೆಗೆದುಕೊಂಡಿದೆ. ಅದರಲ್ಲಿ ಬೆಳೆಯಿದ್ದರೆ ಅದಕ್ಕೆ ತಕ್ಕಂತೆ ಪರಿಹಾರ ಕೊಡಲಾಗುತ್ತದೆ.

ಶ್ರೀ ಡಿ. ಮೂಕಪ್ಪ.—ಯಾವ ಯಾವ ಬೆಳೆಗೆ ಯಾವ ಯಾವ ರೀತಿ ಪರಿಹಾರ ನೀಡಲು ನಿಗದಿ ಮಾಡಿದ್ದಾರೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆಯಾಯ ಬೆಳೆಯೋಗ್ಯತೆ ನೋಡಿಕೊಂಡು ಅದನ್ನು ನಿಗದಿ ಮಾಡಲಾಗುತ್ತದೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಈ ರೀತಿ ಎಷ್ಟು ಎಕರೆ ಭೂಮಿಯಲ್ಲಿ ಫಸಲು ನಷ್ಟವಾಗಿದೆಯೆಂಬುದರ ಬಗ್ಗೆ ಸರ್ಕಾರದವರು ಸರ್ವೆಮಾಡಿಸಿದ್ದಾರೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ಆ ಬಗ್ಗೆ ವಿಚಾರಣೆ ನಡೆಯುತ್ತಿದೆ. ಆ ವರದಿ ಬಂದ ಮೇಲೆ ಆ ವಿವರಗಳೆಲ್ಲಾ ಗೊತ್ತಾಗುತ್ತವೆ.

ಶ್ರೀ ಡಿ. ಮೂಕಪ್ಪ.—ಈ ಪರಿಹಾರ ಗೇಣಿದಾರರಿಗೂ ಲಭಿಸುವುದೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ವರದಿ ಬಂದ ನಂತರ ಅದು ಗೊತ್ತಾಗುತ್ತದೆ.

Sri C. J. MUCKANNAPPA.—In how many cases action has been taken to award compensation?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲಿ number of cases ಎಷ್ಟು ಎಂದು ಕೇಳಿದ್ದಾರೆ; ಆದರೆ ಆ ಬಗ್ಗೆ ಈಗತಾನೆ ಎಕ್ಕೆಕ್ವೈರಿ ನಡೆಯುತ್ತಿದೆ. ಅದಿನ್ನೂ ಮುಗಿದಿಲ್ಲ. ಈ ಸಂದರ್ಭದಲ್ಲಿ ಜಮೀನನ್ನು ಅಕ್ವಿಜಿಷನ್ ಆಕ್ಟ್ ಸೆಕ್ಷನ್ 17ರ ಪ್ರಕಾರ ಸ್ವಾಧೀನಪಡಿಸಿಕೊಳ್ಳಲಾಗಿದೆ. ಈಗ ಈ ಸಂಬಂಧದಲ್ಲಿ ಸರ್ಕಾರಕ್ಕೆ ವಿಶದವಾಗಿ ವರದಿ ಬಂದಿಲ್ಲ. ಬಂದ ನಂತರ ಮುಂದಿನ ವಿವರಗಳು ಗೊತ್ತಾಗಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—(ಬ)ಗೆ ಉತ್ತರವಾಗಿ 'action is being taken' ಎಂದು ಹೇಳಿದ್ದೀರಿ. ಎಷ್ಟು ಕೇಸುಗಳೆಂದು ಹೇಳುತ್ತೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ವರದಿ ಬಂದಿಲ್ಲ. ಅದು ಬಂದ ನಂತರ ಗೊತ್ತಾಗುತ್ತದೆ.

ಶ್ರೀ ಬಿ. ರಾಚಯ್ಯ.—ಯಾವ ಯಾವ ಭೂಮಿಯಲ್ಲಿ ಅಲ್ಲಿ ಯಾರು ಯಾರು ಗೇಣಿದಾರರೆಂಬುದರ ಬಗ್ಗೆ ಒಂದು ಪಟ್ಟಿ ತರಿಸುತ್ತೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅಲ್ಲಿಂದ ರಿಪೋರ್ಟ್ ಬಂದ ಮೇಲೆ ಆ ವಿಚಾರಗಳೆಲ್ಲಾ ಗೊತ್ತಾಗುತ್ತವೆ.

Estimate for Supply of I.P. Sets for Gopikunte and Baragur

Q.—855. Sri T. TARE GOWDA (Sira).—

Will the Government be pleased to state:—

(*a*) whether the estimates for I.P. sets for the villages, *viz*., Hosalli in Gowdagere hobli, Gopikunte and Baragur in Hulikunte hobli are submitted to Government by the Chief Engineer (Electricity) for sanction;

(*b*) if so, whether sanction has been accorded for the same?

A.—Sri H. K. VEERANNA GOWDH (Minister for Public Works).—

(*a*) No.

(*b*) Does not arise.

ಶ್ರೀ ಟಿ. ತಾರೇಗೌಡ.—ಈ ಐ. ಪಿ. ಸೆಟ್‌ಗಳ ವಿಚಾರದಲ್ಲಿ ಶಿರಾದಲ್ಲಿರುವ ಎಲೆಕ್ಟ್ರಿಕಲ್ ಆಪರೇಟರು ಎಲೆಕ್ಟ್ರಿಕಲ್ ಇಂಜಿನಿಯರಿಗೇನಾದರೂ ರಿಪೋರ್ಟ್ ಮಾಡಿದ್ದಾರೆಯೇ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಕೇವಲ ಅರ್ಜಿಗಳು ಬಂದಿರುತ್ತವೆಯೇ ಹೊರತು ಯಾರೂ ಈ ಬಗ್ಗೆ ಹಣವನ್ನು ಈವರೆಗೂ ಡೆಪಾಜಿಟ್ ಮಾಡಿಲ್ಲ. ಆದ್ದರಿಂದ

(ಶ್ರೀ ಎಚ್. ಕೆ. ವೀರಣ್ಣಗೌಡ)

ರಿಪೋರ್ಟ್‌ಮಾಡತಕ್ಕ ಸಂದರ್ಭ ಏಳುವುದಿಲ್ಲ. ಈಗ ಅಲ್ಲಿ ಈ ಬಗ್ಗೆ ಇನ್ನೂ ಪ್ರಿಲಮನರಿ ವಿಚಾರಣೆ ಆಗುತ್ತಿದೆಯೆಂದು ಕಾಣುತ್ತಿದೆ.

ಶ್ರೀ ಟಿ. ತಾರೇಗೌಡ.—ಈ ವಿಚಾರದಲ್ಲಿ ತಮಗೆ ಎಷ್ಟು ದಿವಸಗಳ ಕೆಳಗೆ ರಿಪೋರ್ಟ್ ಬಂದಿದೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ನಮಗಿನ್ನೂ ರಿಪೋರ್ಟ್ ಬಂದಿಲ್ಲ. ಆ ರೀತಿ ಇರಬಹುದೆಂದು ತಿಳಿಸಿದೆ. ಡೆಪಾಜಿಟ್ ಮಾಡಿದ್ದರೆ ಮುಂದಿನ ಕ್ರಮ ಕೈಕೊಳ್ಳುತ್ತಿದ್ದರು. ಆದರೆ ಆ ರೀತಿ ಯಾರೂ ಇನ್ನೂ ಹಣವನ್ನು ಡಿಪಾಜಿಟ್ ಮಾಡಿಲ್ಲವೆಂದು ಕಾಣುತ್ತದೆ.

ಶ್ರೀ ಟಿ. ತಾರೇಗೌಡ.—ಆ ರೀತಿ ಹಣವನ್ನು ಯಾರೂ ಡೆಪಾಜಿಟ್ ಮಾಡಿಲ್ಲ ಎಂದು ತಮಗೇನಾದರೂ ವರದಿ ಬಂದಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ನೋಟೀಸ್.

Net Income of the Road Transport Department

Q.—1084. **Sri G. SIVAPPA** (Chitaldrug).—

Will the Government be pleased to state:—

the net income derived by the Road Transport Department in the old Mysore State since five years (yearwise information may be furnished)?

A.—**Sri C. M. POONACHA** (Minister for Home Affairs and Industries).—

Year		*Net income* Rs.
1952-53	...	25,725
1953-54	...	8,57,838
1954-55	...	15,06,345
1955-56	...	16,07,009
1956-57 (Prov.)	...	18,05,508

Sri G. SIVAPPA.—May I know whether Government has got any idea of the net income from the Road Transport Department of the old Mysore State area for at least the six months of 1957-58?

***Sri C. M. POONACHA.**—We have not got the figures for 1957-58.

Sri G. SIVAPPA.—May I know whether you are keeping separate accounts or one single account for all the integrated areas?

Sri. C. M. POONACHA.—From 1st November 1956 there is only one account. There is no separate account, but we have various divisions and from the divisions we get separate statements and they are compiled and produced as one account head.

Sri G. SIVAPPA.—What is the capital invested in the old Mysore State road programmes?

Sri C. M. POONACHA.—I should like to have notice of that question.

Sri H. M. CHANNABASAPPA.—What is the length of the roads covered by Government Road Transport buses during these years?

Sri C. M POONACHA.—The total milage performed is as follows:

1952-53	...	40,76,362
19 3-54	...	39,51,558
1954-55	...	48,22,610
1955-56	...	54,74,281
1956-57	...	68,06,415

Sri C. J. MUCKANNAPPA.—Does this include jatra trips also?

Sri C. M. POONACHA.—This is the total mileage performed by the Road Transport vehicles.

Sri C. J. MUCKANNAPPA.—Does it include the jatra trips conducted by the Government Road Transport buses?

Sri C. M. POONACHA.—Certainly. Earnings from out of the special trips are also included for the purpose of calculating the net profit.

Sri H. M. CHANNABASAPPA.—What is the number of buses that were put on the road during these years?

Sri C. M. POONACHA.—They are 146, 149, 183, 221 and 240 for 1952-53 1953-54, 1954-55, 1955-56 and 1956-57 respectively.

Sri C. K. RAJAIAH SETTY.—What percentage of the profit does this figure work out on the capital outlay for the year 1956-57?

Sri C. M. POONACHA.—I would require notice to answer this question.

ಶ್ರೀ ಇ. ನಾರಾಯಣಗೌಡ.—ಈಚೆಗೆ ಸೆಕ್ಯೂರಿಟಿ ಅಧಿಕಾರಿಗಳೆಂದು ನೇಮಕ ಮಾಡಿದ್ದೀರಿ. ಈ ರೀತಿಯಾದ ಎಷ್ಟುಜನ ಅಧಿಕಾರಿಗಳನ್ನು ನೇಮಕ ಮಾಡಿದ್ದೀರಿ?

ಅಧ್ಯಕ್ಷರು.—ಈ ಪ್ರಶ್ನೆ ಇದರಲ್ಲಿ ಬರುವುದಿಲ್ಲ. ಇನ್‌ಕಂ ಬಗ್ಗೆ ಪ್ರಶ್ನೆ ಇದ್ದರೆ ಮಾತ್ರ ತಾವು ಪ್ರಶ್ನೆ ಕೇಳಬಹುದು.

ಶ್ರೀ ಯು. ಎಂ. ಮಾದಪ್ಪ.—1956-57 ರಲ್ಲಿ ಶೇಕಡ ಇಷ್ಟು ದುಡ್ಡು ಬರುತ್ತದೆ ಆದಾಯಕ್ಕಾಗಿ ಇಷ್ಟನ್ನು ಇನ್‌ವೆಸ್ಟು ಮಾಡಿದೆ ಎಂದು ಹೇಳಿದಿರಿ. 1952-56 ವೆಯ ಸಾಲನವರೆಗೆ ಎಷ್ಟು ವರಮಾನ ಬಂದಿತು ಎನ್ನುವುದನ್ನು ಹೇಳುವುದಕ್ಕೆ ಸಾಧ್ಯವೇ?

ಶ್ರೀ ಸಿ. ಎಂ. ಪೂಣಚ್ಚ.—ಉತ್ತರ ನನ್ನಲ್ಲಿಲ್ಲ.